ನ.17ರಿಂದ 20ರವರೆಗೆ ಕೃಷಿಮೇಳ

ಬೆಂಗಳೂರು: ಕೃಷಿಮೇಳ 2023ರನ್ನು ನ.17ರಿಂದ 20ರ ವರೆಗೆ ಆಹಾರ ಆರೋಗ್ಯ - ಆದಾಯಕ್ಕಾಗಿ ಸಿರಿಧಾನ್ಯಗಳು ಎಂಬ ಘೋಷವಾಕ್ಯದೊಂದಿಗೆ ಗಾಂಧಿ ಕೃಷಿವಿಜ್ಞಾನ ಕೇಂದ್ರ, ಜಿ.ಕೆ.ವಿ.ಕೆ ಆವರಣದಲ್ಲಿ ಆಚರಿಸಲಾಗುತ್ತದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷ ಅಂತರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿರುವುದರಿಂದ ವಿಶೇಷವಾಗಿ ಕೃಷಿಮೇಳದ ಮೂರನೇ ದಿನ ಭಾನುವಾರದಂದು ಸಾಂಪ್ರದಾಯಿಕ ಸಿರಿಧಾನ್ಯಗಳ ಆಹಾರ ಮೇಳವನ್ನು ಸಂಜೆ 4.30 ರಿಂದ 6.00 ರವರೆಗೆ ಏರ್ಪಡಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೃಷಿಮೇಳವನ್ನು ಉದ್ಘಾಟಿಸಲಿದ್ದಾರೆ ಎಂದರು.

ಕೃಷಿಮೇಳಕ್ಕೆ ಆಗಮಿಸುವವರಿಗೆ ಶೇ.50ರ ರಿಯಾಯಿತಿ ಯೊಂದಿಗೆ 40 ರೂ.ಗಳಂತೆ ಮಧ್ಯಾಹ್ನದ




ಊಟದ ವ್ಯವಸ್ಥೆ ಕಲ್ಪಿಸಲಾಗಿದ್ದು, ರಾಜ್ಯದಲ್ಲಿ ಈ ಬಾರಿ ಬರಗಾಲ ಆವರಿಸಿರುವುದರಿಂದ, ಬರಗಾಲಕ್ಕೆ ತಕ್ಕಂತೆ ಸೂಕ್ತ ಕೃಷಿತಾಂತ್ರಿಕತೆಗಳಿಗೆ ಒತ್ತು ನೀಡಲಾಗಿದೆ ಹಾಗೂ ನಾಟಿ ರಾಸುಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ವಿವರಿಸಿದರು.

ಕೃಷಿಮೇಳದ ಮಳಿಗೆಗಳ ಕಾಯ್ದಿರಿಸುವಿಕೆ ಪ್ರಾರಂಭವಾಗಿದ್ದು, ಹೆಚ್ಚಿನ ಮಾಹಿತಿಗಾಗಿ 080-23638883 I 23330153 ವಿಸ್ತರಣೆ:403/335/327ಗೆ ಸಂಪರ್ಕಿಸಬಹುದಾಗಿದೆ.

ಕೃಷಿಮೇಳ ಭಿತ್ತಿಪತ್ರ ಬಿಡುಗಡೆ

27-10-2023
Vijayavani Pg 2B



ವಿಜಯವಾಣಿ ಚಿತ್ರ

'ಕೃಷಿಮೇಳ - 2023'ರ ಭಿತ್ತಿಪತ್ರವನ್ನು ಕುಲಪತಿ ಡಾ. ಸುರೇಶ ಬಿಡುಗಡೆ ಮಾಡಿದರು. ಡಾ. ನಾರಾಯಣಸ್ವಾಮಿ, ಡಾ. ಪ್ರಕಾಶ್ ಮತ್ತಿತರರಿದ್ದರು.

ಬೆಂಗಳೂರು: ಮುಂಬರುವ ನ.17ರಿಂದ 20ರವರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ನಿಗದಿಯಾಗಿರುವ 'ಕೃಷಿಮೇಳ-2023'ರ ಭಿತ್ತಿಪತ್ರವನ್ನು ಬಿಡುಗಡೆ ಮಾಡಲಾಗಿದೆ.

ಕುಲಪತಿ ಡಾ. ಎಸ್.ವಿ. ಸುರೇಶ ಗುರುವಾರ ಭಿತ್ತಿಪತ್ರವನ್ನು ಲೋಕಾರ್ಪಣೆಗೊಳಿಸಿದರು. 'ಆಹಾರ- ಆರೋಗ್ಯ ಆದಾಯಕ್ಕಾಗಿ ಸಿರಿಧಾನ್ಯಗಳು' ಎಂಬ ಘೋಷವಾಕ್ಯದೊಂದಿಗೆ ಮೇಳವನ್ನು ಸಂಘಟಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸಮಾರೋಪದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಭಾಗವಹಿಸಲಿದ್ದಾರೆ ಎಂದು ಸುರೇಶ ತಿಳಿಸಿದರು.

- ನ.17ರಿಂದ 20ರವರೆಗೆ ಜಿಕೆವಿಕೆಯಲ್ಲಿ ಆಯೋಜನೆ
- ಮಳಿಗೆಗಳ ಕಾಯ್ದಿರಿಸುವಿಕೆ ಪ್ರಾರಂಭ

ಶಿಕ್ಷಣ ನಿರ್ದೇಶಕ ಡಾ. ಕೆ.ಸಿ. ನಾರಾಯಣಸ್ವಾಮಿ, ಡೀನ್ (ಕೃಷಿ) ಡಾ. ಎನ್.ಬಿ. ಪ್ರಕಾಶ್, ಡೀನ್ (ಸ್ನಾತಕೋತ್ತರ) ಡಾ. ಎಚ್.ಸಿ. ಪ್ರಕಾಶ್, ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್. ಮಧುಪ್ರಸಾದ್, ಸಂಶೋಧನಾ ನಿರ್ದೇಶಕ ಡಾ. ವೆಂಕಟೇಶ್ ಮತ್ತು ಹಿರಿಯ ವಾರ್ತಾಧಿಕಾರಿ ಡಾ. ಕೆ. ಶಿವರಾಮು ಉಪಸ್ಥಿತರಿದ್ದರು.

ಆಂತರಾಷ್ಟ್ರೀಯ ಸಿರಿಧಾನ್ಯ ವರ್ಷ ಹಿನ್ನೆಲೆಯಲ್ಲಿ ವಿಶೇಷವಾಗಿ ಕೃಷಿಮೇಳದ 3ನೇ ದಿನ ಸಾಂಪ್ರದಾಯಿಕ ಸಿರಿಧಾನ್ಯಗಳ ಆಹಾರಮೇಳವನ್ನು ಸಂಜೆ 4.30ರಿಂದ 6ರವರೆಗೆ ಏರ್ಪಡಿಸಲಾಗಿದೆ. ರಾಜ್ಯದಲ್ಲಿ ಬರಗಾಲ ಆವರಿಸಿರುವುದರಿಂದ ಸೂಕ್ತ ಕೃಷಿ ತಾಂತ್ರಿಕತೆಗಳ ಕುರಿತು ಒತ್ತು ನೀಡಲಾಗುತ್ತಿದೆ.

ಮಳಿಗೆಗಳ ಕಾಯ್ದಿರಿಸುವಿಕೆ ಆರಂಭ: ಕೃಷಿಮೇಳಕ್ಕೆ ಆಗಮಿಸುವವರಿಗೆ ಶೇ.50 ರಿಯಾಯಿತಿಯೊಂದಿಗೆ ತಲಾ 40 ರೂ. ನಂತೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ನಾಟಿ ರಾಸುಗಳ ಪ್ರದರ್ಶನವಲ್ಲದೆ ವಿವಿಧ ಜಾನುವಾರುಗಳ ಪ್ರದರ್ಶನ ಏರ್ಪಡಿಸಲಾಗಿದೆ. ಮೇಳದ ಮಳಿಗೆಗಳ ಕಾಯ್ದಿರಿಸುವಿಕೆ ಪ್ರಾರಂಭವಾಗಿದ್ದು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-23638883, 23330153 ವಿಸ್ತರಣೆ: 403/ 335 ಸಂಪರ್ಕಿಸಬಹುದು.

27-10-2023
Hosadiganta Pg 06

27-10-2023
E sanje Pg 06

ಜಿಕೆವಿಕೆಯಲ್ಲಿ 17ರಿಂದ ಕೃಷಿ ಮೇಳ



ಬೆಂಗಳೂರು, ಅ.26- ಆಹಾರ-ಆರೋಗ್ಯ ಆದಾಯಕ್ಕಾಗಿ ಸಿರಿಧಾನ್ಯಗಳು ಎಂಬ ಘೋಷವಾಕ್ಯದೊಂದಿಗೆ ಈ ಬಾರಿ ಜಿಕೆವಿಕೆ ಆವರಣದಲ್ಲಿ 17ರಿಂದ 20ರವರೆಗೆ ಕೃಷಿ ಮೇಳ ಆಯೋಜಿಸಲಾಗಿದೆ ಎಂದು ಕುಲಪತಿ ಡಾ. ಎಸ್ ಸುರೇಶ್ ತಿಳಿಸಿದ್ದಾರೆ.

ಕೃಷಿ ಮೇಳ 2023ರ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಈ ವರ್ಷ ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷವಾಗಿರುವುದರಿಂದ ವಿಶೇಷವಾಗಿ 3 ದಿನ ಕೃಷಿ ಮೇಳ ಆಯೋಜಿಸಲಾಗಿದೆ. ಕೊನೆಯ ದಿನ ಸಾಂಪ್ರದಾಯಿಕ ಸಿರಿಧಾನ್ಯಗಳ ಆಹಾರ ಮೇಳವನ್ನು ಸಂಜೆ 4.30 ರಿಂದ 6ರ ವರೆಗೆ ಏರ್ಪಡಿಸಲಾಗಿದೆ.

ರಾಜ್ಯದಲ್ಲಿ ಈ ಬಾರಿ ಬರಗಾಲ ಆವರಿಸಿರುವುದರಿಂದ ಬರಗಾಲಕ್ಕೆ ತಕ್ಕಂತೆ ಸೂಕ್ತ ಕೃಷಿತಾಂತ್ರಿಕತೆಗಳಿಗೆ ಒತ್ತು ನೀಡಲಾಗುತ್ತಿದೆ. ಜೊತೆಗೆ ಹೊಸ ಹೊಸ ತಂತ್ರಜ್ಞಾನ ಬೆಳೆಗಳ ಅವಿಷ್ಕಾರ, ನಾಟಿ ರಾಸುಗಳ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಳವನ್ನು ಉದ್ಘಾಟಿಸಲಿದ್ದಾರೆ. ಮತ್ತು ಸಮರೋಪ ಸಮಾರಂಭದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಕೃಷಿ ವಿವಿ ಕುಲಪತಿ ಡಾ. ಕೆಸಿ ನಾರಾಯಣ ಸ್ವಾಮಿ, ಡಾ. ಎನ್‌ಡಿ ಪ್ರಕಾಶ್, ಡಾ. ಡಿಎಲ್ ಮಧುಪ್ರಸಾದ್, ಡಾ. ವೆಂಕಟೇಶ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಕೃಷಿ ಮೇಳದಲ್ಲಿ ಮಳಿಗೆಗಳನ್ನು ತೆರೆಯಲು ಕಾಯ್ದಿರಿಸುವಿಕೆಯ ಪ್ರಕ್ರಿಯೆ ಪ್ರಾರಂಭವಾಗಿದ್ದು, ಹೆಚ್ಚಿನ ಮಾಹಿತಿಗಾಗಿ 080-23638883, 23330153ಗೆ ಸಂಪರ್ಕಿಸಬಹುದಾಗಿದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

ವಿದ್ಯಾರ್ಥಿಗಳ ಕೃಷಿ ಕಾರ್ಯಾನುಭವ

ಸಂ.ಕ. ಸಮಾಚಾರ, ಸೂಲಿಬೆಲೆ

ಕೃಷಿ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು ಸುಮಾರು 3 ತಿಂಗಳ ಕಾಲ ಗ್ರಾಮೀಣ ಭಾಗದ ಕೃಷಿ ಕಾರ್ಯಾನುಭವ ಕಾರ್ಯಕ್ರಮದಡಿಯಲ್ಲಿ ಗ್ರಾಮ ವಾಸ್ತವ್ಯ ಮಾಡಿ ನೈಜ ಕೃಷಿಯ ಸಮಸ್ಯೆಗಳು ಹಾಗೂ ಪರಿಹಾರಗಳನ್ನು ಕಂಡುಕೊಳ್ಳಲಿದ್ದಾರೆ ಎಂದು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಡಾ.ಹೆಚ್.ಕೆ.ಪಂಕಜಾ ಹೇಳಿದರು.

ಸೂಲಿಬೆಲೆ ಹೋಬಳಿ ಕಂಬಳೀಪುರ ಗ್ರಾಮಪಂಚಾಯತ್ ವ್ಯಾಪ್ತಿಯ ದೊಡ್ಡಕೋಲಿಗ ಗ್ರಾಮದಲ್ಲಿ ಬುಧವಾರ ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿರುವ 90 ದಿನಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಗ್ರಾಮೀಣ ಭಾಗದಲ್ಲಿ ಕೃಷಿ ನಿರ್ವಹಣೆ ಕುರಿತಾದ 90 ದಿನಗಳ ಕಾರ್ಯಾನುಭವ ನಡೆಯಲಿದ್ದು, ಗ್ರಾಮದ ರೈತಾಪಿ ಕುಟುಂಬಗಳ ಹಾಗೂ ಬೆಳೆಗಳ ಸಮೀಕ್ಷೆ ವಿದ್ಯಾರ್ಥಿಗಳಿಂದ ನಡೆಯುತ್ತಿದೆ ಎಂದರು.

ಸೂಲಿಬೆಲೆ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘದ ನಿರ್ದೇಶಕ ಬಿ.ತಮ್ಮೇಗೌಡ ಮಾತನಾಡಿ, ಅತಿ ಚಿಕ್ಕ ದೇಶವಾದ ಇಸ್ರೇಲ್‌ನಲ್ಲಿ ನವೀನವಾದ ಕೃಷಿ ಪದ್ಧತಿಗಳನ್ನು ಅಳವಡಿಸಿದ್ದು, ಹನಿ ನೀರಾವರಿ ಅಳವಡಿಕೆಯಲ್ಲಿ ಮುಂಚೂಣಿಯಲ್ಲಿರುವ ದೇಶವಾಗಿದೆ. ಕಡಿಮೆ ವೆಚ್ಚದಲ್ಲಿ ಅತಿ ಹೆಚ್ಚಿನ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಾರೆ ಎಂದು ಹೇಳಿದರು. ಅಂತಿಮ ವರ್ಷದ ಬಿಎಸ್ಸಿ ವಿದ್ಯಾರ್ಥಿ ತಿಪ್ಪೇಸ್ವಾಮಿ ಮಾತನಾಡಿ, 90 ದಿನಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ ದೊಡ್ಡಕೋಲಿಗ ಗ್ರಾಮದಲ್ಲಿ ಹಮ್ಮಿಕೊಂಡಿದ್ದು, ಕೃಷಿಕರೊಂದಿಗೆ ಅನುಭವವನ್ನು ವಿನಿಮಯ ಮಾಡಿಕೊಳ್ಳುವ ಅವಕಾಶ ಒದಗಿ ಬಂದಿದೆ ಎಂದು ಹೇಳಿದರು.

ಗ್ರಾ.ಪಂ ಅಧ್ಯಕ್ಷೆ ಮಮತ, ಮಾಜಿ ಅಧ್ಯಕ್ಷ ರಮೇಶ್, ಸದಸ್ಯ ಶಿವಕುಮಾರ್, ಮುಖಂಡ ಗೋಪಾಲಪ್ಪ, ಡೇರಿ ಅಧ್ಯಕ್ಷ ರಾಜಣ್ಣ, ರೈತ ಸಂಪರ್ಕ ಕೇಂದ್ರ ಚಿಕ್ಕಪ್ಪಯ್ಯಣ್ಣ, ಕೃಷಿ ವಿಸ್ತರಣಾ ವಿಭಾಗದ ಡಾ.ಎ.ವಿದ್ಯಾ, ತೋಟಗಾರಿಕೆ ವಿಭಾಗದ ಡಾ.ಅನಿತಾ, ಡೇರಿ ನಿರ್ದೇಶಕ ಮಂಜುನಾಥ್, ದೊಡ್ಡಕೋಲಿಗ ಕೃಷಿಕ ಶಿವಕುಮಾರ್, ಮಧು, ರಾಮಮೂರ್ತಿ, ಮಲ್ಲೇಶ್, ಮಾರುತಿ, ಇತರರು ಇದ್ದರು.



27-10-2023
S-karnataka Pg 02

27-10-2023
Sanjevani Pg 03

ಕೃ.ವಿ.ವಿ, ಬೆಂಗಳೂರಿನ ಕೃಷಿಮೇಳ-2023ರ ಭಿತ್ತಿಪತ್ರ ಬಿಡುಗಡೆ



ಬೆಂಗಳೂರು.ಅ26:ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ, ಕೃಷಿಮೇಳ – 2023ರ ಭಿತ್ತಿಪತ್ರವನ್ನು ಡಾ: ಎಸ್.ವಿ.ಸುರೇಶ, ಕುಲಪತಿಗಳು ಬಿಡುಗಡೆಗೊಳಿಸಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿ.ಕೆ.ವಿ.ಕೆ) ಆವರಣದಲ್ಲಿ ನವೆಂಬರ್ 17 ರಿಂದ 20ರ ವರೆಗೆ ಆಹಾರ ಆರೋಗ್ಯ ಆದಾಯಕ್ಕಾಗಿ ಸಿರಿಧಾನ್ಯಗಳು ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಈ ವರ್ಷ ಅಂತರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿರುವುದರಿಂದ ವಿಶೇಷವಾಗಿ ಕೃಷಿಮೇಳದ ಮೂರನೇ ದಿನ ಭಾನುವಾರದಂದು ಸಾಂಪ್ರದಾಯಿಕ ಸಿರಿಧಾನ್ಯಗಳ ಆಹಾರಮೇಳವನ್ನು ಸಂಜೆ 4.30 ರಿಂದ 600 ರವರೆಗೆ ಏರ್ಪಡಿಸಲಾಗಿದೆ.

ರಾಜ್ಯದಲ್ಲಿ ಬರಗಾಲವು ಆವರಿಸಿರುವುದರಿಂದ ಬರಗಾಲಕ್ಕೆ ಸೂಕ್ತ ಕೃಷಿ ತಾಂತ್ರಿಕತೆಗಳ ಕುರಿತು ಒತ್ತು ನೀಡಲಾಗುತ್ತಿದೆ. ಕೃಷಿಮೇಳಕ್ಕೆ ಆಗಮಿಸುವವರಿಗೆ ಶೇಕಡಾ 500 ರಿಯಾಯಿತಿಯೊಂದಿಗೆ ರೂ.40.00 ರಂತೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಮತ್ತು ಇದು ಕಳೆದ ವರ್ಷಕ್ಕಿಂತ ಒಂದು ಊಟಕ್ಕೆ ರೂ.10.00ಗಳು ಕಡಿಮೆಯಾಗಿರುತ್ತದೆ.ಪಾಟಿಲಸ ುಗಳ ಪದರ್ಶನವನ್ನು ಸಹ ಏರ್ಪಡಿಸಲಾಗಿದೆ.

ಕೃಷಿಮೇಳದ ಉದ್ಘಾಟನೆಯನ್ನು ಸಿಎಂ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ, ಸಮಾರೋಪ ಸಮಾರಂಭದಲ್ಲಿರಾಜ್ಯಪಾಲರು ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಥಾವರ್ ಚಂದ್ ಗೆಲ್ಲೋಟ್ ಭಾಗವಹಸಲಿದ್ದಾರೆ.

ಈ ವೇಳೆ ಶಿಕ್ಷಣ ನಿರ್ದೇಶಕ ಡಾ. ಕೆ.ಸಿ. ನಾರಾಯಣಸ್ವಾಮಿ, , ಡಾ. ಎನ್.ಬಿ, ಪ್ರಕಾಶ್, ಡೀಪ್ (ಕೃಷಿ), ಡಾ. ಹೆಚ್. ಪ್ರಕಾಶ್, ಡೀನ್ (ಸ್ನಾತ–ಕೋತ್ತರ), ಡಾ. ವಿ.ಎಲ್. ಮಧುಪ್ರಸಾದ್, ವಿಸ್ತರಣಾ ನಿರ್ದೇಶಕರು, ಡಾ. ವೆಂಕಟೇಶ್, ಸಂಶೋಧನಾ ನಿರ್ದೇಶಕರು ಮತ್ತು ಡಾ. ಕೆ. ಶಿದರಾಮು, ಹಿರಿಯ ವಾರ್ತಾತಜ್ಞರು ಹಾಗೂ ಮುಖ್ಯಸ್ಥರು, ಕೃವಿವಿ, ಜಿಕೆವಿಕೆ, ಬೆಂಗಳೂರು ರವರು ಉಪಸ್ಥಿತರಿದ್ದರು. ಕೃಷಿಮೇಳದ ಮಳಿಗೆಗಳ ಕಾಯ್ದಿರಿಸುವಿಕೆ ಪ್ರಾರಂಭವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ:080–23638883 । 23330155 ವಿಸ್ತರಣೆ:403,335/327 ಗೆ ಸಂಪರ್ಕಿಸಬಹುದಾಗಿದೆ

ಕಾನೂನು ಅರಿವು ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ 200ಕ್ಕೂ ಹೆಚ್ಚಿನ ವನ್ಯಜೀವಿಗಳ ಪಟ್ಟಿ | ಅಕ್ರಮವಾಗಿ ಅರಣ್ಯ ಪ್ರವೇಶಿಸುವುದು ಕೂಡ ಅಪರಾಧ

ಹುಲಿ ಉಗುರಷ್ಟೇ ಅಲ್ಲ ಕೀಟ, ಸಸ್ಯ ಮುಟ್ಟಿದ್ರೂ ಜೈಲು!

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಸದ್ಯ ಹುಲಿ ಉಗುರು ಬಳಕೆ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಆದರೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಹುಲಿಯಷ್ಟೇ ಅಲ್ಲದೆ 200ಕ್ಕೂ ಹೆಚ್ಚಿನ ಪ್ರಾಣಿ, ಪಕ್ಷಿ, ಕೀಟ, ಜಲಚರಗಳ ಬೇಟೆ ಮಾಡುವುದಷ್ಟೇ ಅಲ್ಲದೆ ಅವುಗಳ ಅಂಗಾಂಗಗಳನ್ನು ಶೇಖರಿಸುವುದೂ ಅಪರಾಧವಾಗಿದೆ. ಅಷ್ಟೇ ಅಲ್ಲದೆ ಅಭಯಾರಣ್ಯ ಸೇರಿ ಇನ್ನಿತರ ಅರಣ್ಯ ಪ್ರದೇಶದಲ್ಲಿನ ವಿಶೇಷ ಸಸಿ, ಮರಗಳನ್ನು ಕಡಿಯುವುದು, ಕೀಳುವುದು ಕೂಡ ಅಕ್ರಮದ ವ್ಯಾಪ್ತಿಯಲ್ಲಿದೆ.

ಹುಲಿ ಉಗುರಿನ ಆಭರಣವನ್ನು ಹೊಂದಿದ ಪ್ರಕರಣ ರಾಜ್ಯಾದ್ಯಂತ ಸದ್ದು ಮಾಡುತ್ತಿದೆ. ಚಲನಚಿತ್ರ ನಟರು ಸೇರಿದಂತೆ ಸೆಲೆಬ್ರಿಟಿಗಳೆಲ್ಲರೂ ಹುಲಿ ಉಗುರಿನ ಉರುಳು ಸುತ್ತಿಕೊಳ್ಳಲಾರಂಭಿಸಿದೆ. ಆದರೆ, ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ 1972ರಲ್ಲಿ ರೂಪಿಸಲಾಗಿರುವ ಕಾಯ್ದೆ ಪ್ರಕಾರ 200ಕ್ಕೂ ಹೆಚ್ಚಿನ ಪ್ರಾಣಿ, ಪಕ್ಷಿ, ಕೀಟ, ಜಲಚರಗಳ ತಂಟೆಗೆ ಹೋಗುವುದು ಅಪರಾಧವಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರಲ್ಲಿ ಉಲ್ಲೇಖಿಸಿರುವ ಪ್ರಾಣಿಗಳ ಅಂಗಾಂಗ ಶೇಖರಣೆ, ಅವುಗಳ ಮಾರಾಟ ಮತ್ತು ಖರೀದಿಯು ಅಪರಾಧವಾಗಿದೆ. ಹೀಗೆ ವನ್ಯಜೀವಿಗಳ ನಾಶಕ್ಕೆ ಕಾರಣವಾಗುವ ಕೃತ್ಯವನ್ನು ಎಸಗಿದರೆ ಅಂತಹವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ ಕ್ರಮ ಕೈಗೊಳ್ಳಬಹುದಾಗಿದೆ.

ಅರಣ್ಯ ಪ್ರವೇಶದ ನೀರಿನಲ್ಲಿ ಓಡಾಟವೂ ನಿಷೇಧ: ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನಗಳಿಗೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳು, ಅರಣ್ಯ ಸಮಿತಿಗಳ ಅನುಮತಿ ಪಡೆಯದೇ ಪ್ರವೇಶಿಸುವಂತಿಲ್ಲ. ಒಂದು ವೇಳೆ ಪ್ರವೇಶಿಸಿದರೂ ಅಂತಹವರು ಯಾವುದೇ ರೀತಿಯ ಆಯುಧವನ್ನು ಹೊಂದುವುದು ಅಪರಾಧವಾಗಲಿದೆ.ಅದಕ್ಕಿಂತಮುಖ್ಯವಾಗಿಅಭಯಾರಣ್ಯ, ರಾಷ್ಟ್ರೀಯ ಉದ್ಯಾನಗಳ ವ್ಯಾಪ್ತಿಯಲ್ಲಿರುವ ನದಿ,ಹಳ್ಳಸೇರಿದಂತೆಇನ್ನಿತರಜಲಮೂಲಗಳಲ್ಲಿ ದೋಣಿಯನ್ನು ತೆಗೆದುಕೊಂಡು ಹೋಗುವುದು, ಮೀನುಗಾರಿಕೆ ಮಾಡುವುದು ಅಕ್ರಮ. ಅಲ್ಲದೆ, ದೋಣಿಯಲ್ಲಿ ಮೀನು ಹಿಡಿಯುವ ಬಲೆಸೇರಿದಂತೆ ಅದಕ್ಕೆಸಂಬಂಧಿಸಿದವಸ್ತುಗಳು ಕಂಡು ಬಂದರೂ ತಕ್ಷಣ ಅದನ್ನು ಜಪ್ತಿ ಮಾಡಿ, ಜೈಲು ಶಿಕ್ಷೆ ಗುರಿಪಡಿಸುವ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಬಹುದಾಗಿದೆ.

ಸಸಿ, ಮರಗಳಿಗೂ ರಕ್ಷಣೆ: ವನ್ಯಜೀವಿಗಳಷ್ಟೇ ಅಲ್ಲದೆ, ಅಭಯಾರಣ್ಯ, ರಾಷ್ಟ್ರೀಯ ಉದ್ಯಾನಗಳಲ್ಲಿನ ಸಸಿ, ಮರಗಳನ್ನು ಕಡಿಯುವುದು ಅಥವಾ ಅವುಗಳನ್ನು ಕೀಳುವುದು ನಿಷಿದ್ಧವಾಗಿದೆ. ಒಂದು ವೇಳೆ ತೀರಾ ಅನಿವಾರ್ಯವಾಗಿ ಮರಗಳನ್ನು ಕಡಿಯಬೇಕೆಂದಾದರೆ ಅದಕ್ಕೆ ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಲಿದೆ. ಅಲ್ಲದೆ, ಅರಣ್ಯ ಪ್ರದೇಶದಿಂದ ಯಾವುದೇ ಮರದ ಸಣ್ಣ ತುಂಡು ತೆಗೆದುಕೊಂಡು ಹೋಗುವುದೂ ಕಾಯ್ದೆಯಲ್ಲಿ ಅಕ್ರಮದ ಪಟ್ಟಿಗೆ ಸೇರಿಸಲಾಗಿದೆ.



ಯಾವೆಲ್ಲ ವಸ್ತು ಶೇಖರಣೆ ನಿಷಿದ್ಧ?

ವನ್ಯಜೀವಿ ಸಂರಕ್ಷಣ ಕಾಯ್ದೆ ಪ್ರಕಾರ ಹುಲಿಯಷ್ಟೇ ಅಲ್ಲದೆ, ಜಿಂಕೆ, ಆನೆ, ಚಿರತೆ, ಕಾಡುಕೋಳಿ, ಹಾರ್ನ್‌ಬಿಲ್, ನವಿಲು, ಶಾರ್ಕ್, ಬ್ಲ್ಯೂ ವೇಲ್ ಸೇರಿದಂತೆ ಇನ್ನಿತರ ಪ್ರಾಣಿ, ಸರಿಸೃಪ, ಮೀನು, ಹಕ್ಕಿಗಳ ಪ್ರಭೇದದ ಜೀವಿಗಳ ಬೇಟೆಯನ್ನು ನಿಷೇಧಿಸಲಾಗಿದೆ.

ಹಾಗೆಯೇ, ಅವುಗಳ ಹಲ್ಲು, ಕೂದಲು, ಉಗುರು, ಮೂಳೆ, ಕೊಂಬು ಸೇರಿದಂತೆ ಇನ್ನಿತರ ವಸ್ತುಗಳನ್ನು ಶೇಖರಿಸಿಡುವುದು, ಧರಿಸುವುದು ಕೂಡ ಅಕ್ರಮವಾಗಿದೆ.

5 ವರ್ಷದಲ್ಲಿ 54 ಹುಲಿಗಳ ಸಾವು

ವನ್ಯಜೀವಿ ಸಂರಕ್ಷಣಾ ಕಾಯ್ದೆ ಸೇರಿ ಹುಲಿ ಸಂರಕ್ಷಣೆಗೆ ಪ್ರತ್ಯೇಕ ಕಾನೂನು ಇದ್ದರೂ ಹುಲಿಗಳ ಕಳ್ಳ ಬೇಟೆ ಸೇರಿದಂತೆ ಇನ್ನಿತರ ಅಕ್ರಮಗಳಿಗೆ ಸಂಪೂರ್ಣ ತಡೆ ಬಿದ್ದಿಲ್ಲ. ಕಳೆದ 5 ವರ್ಷಗಳಲ್ಲಿ (2018-19ರಿಂದ 2022-23ರವರೆಗೆ) ರಾಜ್ಯದಲ್ಲಿ 54 ಹುಲಿಗಳು ಸಾವನ್ನಪ್ಪಿವೆ. ಆದರಲ್ಲಿ ಶೇ.5ರಷ್ಟು ಹುಲಿಗಳು ಕಳ್ಳಬೇಟೆ ಅಥವಾ ಅಸಹಜ ಸಾವಿಗೀಡಾಗಿವೆ. ಅರಣ್ಯ ಇಲಾಖೆ ಮಾಹಿತಿ ಪ್ರಕಾರ 2018-19 ಮತ್ತು 2019-20ರಲ್ಲಿ ತಲಾ 7 ಹುಲಿಗಳು ಸಾವನ್ನಪ್ಪಿದ್ದು, 2020-21ರಲ್ಲಿ 9, 2021-22ರಲ್ಲಿ 18 ಹಾಗೂ 2022-23ರಲ್ಲಿ 13 ಹುಲಿಗಳು ಸೇರಿ ಒಟ್ಟು 54 ಹುಲಿಗಳು ರಾಜ್ಯದ ಅರಣ್ಯ ಪ್ರದೇಶದಲ್ಲಿ ಸಾವನ್ನಪ್ಪಿವೆ. ಆದೇ ಅವಧಿಯಲ್ಲಿ ದೇಶದಲ್ಲಿ 5 ವರ್ಷಗಳಲ್ಲಿ 551 ಹುಲಿಗಳು ಸಾವಿಗೀಡಾಗಿವೆ.

27-10-2023
Kannadaprabha Pg 06

27-10-2023
V-karnataka Pg 10

ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಅನುಷ್ಠಾನ | 19 ಸಾವಿರ ಮಂದಿಗೆ ತರಬೇತಿ

ವಿದ್ಯಾರ್ಥಿಗಳಿಗೆ ತೋಟಗಾರಿಕೆ ಪಾಠ

■ **ವಿಜಯ್ ಕೋಟ್ಯಾನ್** ಮಂಗಳೂರು
vijaya.poojary@timesgroup.com

ವಿದ್ಯಾರ್ಥಿಗಳಿಗೆ ತೋಟಗಾರಿಕೆ, ಕೃಷಿಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತರಬೇತಿ ನೀಡಲು ನಿರ್ಧರಿಸಲಾಗಿದೆ. ನ.14ರ ಮಕ್ಕಳ ದಿನಾಚರಣೆಯಂದೇ ಕಾರ್ಯಕ್ರಮ ಅನುಷ್ಠಾನಕ್ಕೆ ಬರಲಿದೆ.

ಬೆಂಗಳೂರು ಮಹಾನಗರ 4 ಸಾವಿರ ಹಾಗೂ ಉಳಿದ ಮಹಾನಗರಪಾಲಿಕೆಗಳಾದ ಬೆಳಗಾವಿ, ಬಳ್ಳಾರಿ, ದಾವಣಗೆರೆ, ಹುಬ್ಳಿ, ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ವಿಜಯಪುರ ಸೇರಿದಂತೆ ಒಟ್ಟು 19 ಸಾವಿರ ಮಂದಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. 8ರಿಂದ 10 ತರಗತಿವರೆಗಿನ ಮಕ್ಕಳನ್ನು ಈ ತರಬೇತಿಗೆ ಆಯ್ಕೆ ಮಾಡಲಾಗುತ್ತಿದೆ. ಈ ಮಕ್ಕಳಿಗೆ ತೋಟಗಾರಿಕೆಯ ಪ್ರಾಮುಖ್ಯ, ಆವಿಷ್ಕಾರಗಳ ಅರಿವು, ಮಕ್ಕಳಲ್ಲಿ ಪೌಷ್ಟಿಕಾಂಶ ಮಟ್ಟದ ಜ್ಞಾನ, ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಇರುವ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು ಕಾರ್ಯಕ್ರಮದ ಉದ್ದೇಶ ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಪ್ರವೀಣ್ ಮಂಗಳೂರು.

ತೋಟಗಾರಿಕೆ ಪ್ರಾಮುಖ್ಯ, ಬೆಳೆಗಳ ಸಸ್ಯಾಭಿವೃದ್ಧಿ ವಿಧಾನಗಳು, ಕಸಿ ವಿಧಾನ, ಮಣ್ಣಿನ ಫಲವತ್ತತೆ, ಹೈಡ್ರೋಪೋನಿಕ್ಸ್ ಮಾಹಿತಿ, ಎರೆಹುಳು ಗೊಬ್ಬರ ಹಾಗೂ ಸುಧಾರಿತ ಕಾಂಪೋಸ್ಟ್ ತಯಾರಿಕಾ ವಿಧಾನ, ಜೇನು ಕೃಷಿ ಪದ್ಧತಿ, ಅಣಬೆ ಉತ್ಪಾದನಾ ವಿಧಾನ, ಪೌಷ್ಟಿಕಾಂಶ ಕೈತೋಟ, ತಾರಸಿ ತೋಟ, ತೋಟಗಾರಿಕಾ ಬೆಳೆಗಳಲ್ಲಿ ಅನುಸರಿಸುವ ವಿಶೇಷ ಕಾರ್ಯಾಚರಣೆಗಳು. ತರಬೇತಿಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಬ್ಯಾಗ್, ತರಕಾರಿ, ಹಣ್ಣು- ಹಂಪಲು ಬೀಜ, ಗೊಬ್ಬರನ್ನೊಳಗೊಂಡ ಕಿಟ್ ನೀಡಲಾಗುವುದು. ಇದಕ್ಕಾಗಿ 2.50 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದೆ.

ರಾಜ್ಯದ 11 ಮಹಾನಗರಗಳಲ್ಲಿನಿಗದಿತ ಪ್ರದೇಶದಲ್ಲಿತರಬೇತಿಗೆನಿರ್ಧರಿಸಲಾಗಿದ್ದು, ಈ ಆಯ್ಕೆ ಪ್ರಕ್ರಿಯೆ ಡಿಡಿಪಿಐ ನೇತೃತ್ವದಲ್ಲೇ ನಡೆಯಲಿದೆ. ತರಬೇತಿ ನೀಡಿದ ಬಳಿಕ ಹಾರ್ಟಿ ಕ್ಲಿನಿಕ್ ಅಧಿಕಾರಿಗಳನ್ನು ನೇಮಿಸಿ ಶಾಲಾ ಮಕ್ಕಳಲ್ಲಿ ತೋಟಗಾರಿಕೆ ವಿಷಯಗಳು ಕೇಂದ್ರೀಕೃತವಾಗುವಂತೆ ಹಾಗೂ ಆಸಕ್ತಿದಾಯಕವಾಗಿ ಮೂಡಿಬರುವಂತೆ ಯಶಸ್ವಿಯಾಗಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತದೆ.

ಸಾಂದರ್ಭಿಕ ಚಿತ್ರ



ರಾಜ್ಯದ 11 ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 19 ಸಾವಿರ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೋಟಗಾರಿಕಾ ತರಬೇತಿ ನೀಡಲು ಉದ್ದೇಶಿಸಲಾಗಿದೆ. ನ.14ರ ಮಕ್ಕಳ ದಿನಾಚರಣೆಯಂದು ಕಾರ್ಯಕ್ರಮ ಅನುಷ್ಠಾನಕ್ಕೆ ತರಲು ಸುತ್ತೋಲೆ ಹೊರಡಿಸಲಾಗಿದೆ. ವಿದ್ಯಾರ್ಥಿಗಳಿಗೆ ತೋಟಗಾರಿಕೆ ಅರಿವು, ಆವಿಷ್ಕಾರ, ಪೌಷ್ಟಿಕಾಂಶದ ಜ್ಞಾನ ಮೂಡಿಸುವುದೇ ಈ ಕಾರ್ಯಕ್ರಮ ಉದ್ದೇಶ.

-ಎಚ್.ಆರ್.ನಾಯ್ಕ್
ಉಪನಿರ್ದೇಶಕರು,
ತೋಟಗಾರಿಕಾ ಇಲಾಖೆ, ದ.ಕ.

ಮಳೆ ತಂದೊಡ್ಡಿದ ಈರುಳ್ಳಿ ಇಳುವರಿ!

50 ರುಪಾಯಿ ಗಡಿ ದಾಟಿದ ದರ। ಮಾರುಕಟ್ಟೆಯಲ್ಲಿ ಶೇ. 60 ಪೂರೈಕೆ ಕುಸಿತ

ನಿ ಹೂವಪ್ಪ ಐ ಎಚ್ ಬೆಂಗಳೂರು



ರಾಜ್ಯದಲ್ಲಿ ಉಂಟಾಗಿರುವ ತೀವ್ರ ಬರ, ಮಳೆ ಅಭಾವದಿಂದ ಇದೀಗ ಈರುಳ್ಳಿ ಇಳುವರಿ ಕುಸಿತಗೊಂಡಿದೆ. ಪರಿಣಾಮ ಮಾರುಕಟ್ಟೆಗೆ ಈರುಳ್ಳಿ ಆವಕ ಶೇ. 60 ಕಡಿಮೆಯಾಗಿದೆ.

ರಾಜ್ಯದಲ್ಲಿ ಬೆಲೆ ಮತ್ತಷ್ಟು ಏರಿಕೆಯಾಗಿದ್ದು, ಎಪಿಎಂಸಿ ಮಾರುಕಟ್ಟೆಯಲ್ಲಿ ದಸರಾ ಹಬ್ಬದ ಮೊದಲು ಕ್ವಿಂಟಲ್‌ಗೆ ರು.3200-4000 ಮಾರಾಟವಾಗಿದ್ದ ಈರುಳ್ಳಿ, ಇದೀಗ ಉತ್ತಮ ದಪ್ಪ ಗಾತ್ರ ರು. 5000-5400 ಗೆ ಜಿಗಿದಿದೆ. ಚಿಲ್ಲರೆ ಮಾರುಕಟ್ಟೆಗಳಲ್ಲಿ ಕೆಜಿಗೆ ರು.40-42 ಗೆ ಇದ್ದ ಈರುಳ್ಳಿ ಈಗ ದಿಢೀರ್ ರು.55-60 ಏರಿಕೆ ಕಂಡಿದ್ದರಿಂದ ಗ್ರಾಹಕರು ಕಂಗಾಲಾಗಿದ್ದಾರೆ. ಮಧ್ಯಮ ಗಾತ್ರ ಈರುಳ್ಳಿ ಸಗಟು ರು.35-36 ಇದ್ದು, ಚಿಲ್ಲರೆ ದರ ರು.45-46 ಗೆ ಮಾರಾಟವಾಗುತ್ತಿದೆ. ಸಣ್ಣ ಈರುಳ್ಳಿ 35-36 ಮಾರಾಟವಾಗುತ್ತಿದೆ.

ಏಪ್ರಿಲ್‌ನಲ್ಲಿ ಅಕಾಲಿಕ ಮಳೆಯಿಂದಾಗಿ ಅಂದಾಜು 30 ಸಾವಿರ ಹೆಕ್ಟೇರ್‌ಗೂ ಹೆಚ್ಚು ಬೆಳೆ ಹಾನಿಯಾಗಿದ್ದು, ಈ ಹಂಗಾಮಿನಲ್ಲಿ ಒಟ್ಟಾರೆ ಈರುಳ್ಳಿ ಬೆಳೆ ವಿಸ್ತೀರ್ಣವು 2.53 ಲಕ್ಷ ದಿಂದ 2.31 ಲಕ್ಷ ಹೆಕ್ಟೇರ್‌ಗೆ ಕುಸಿದಿದೆ ಎನ್ನಲಾಗಿದೆ. ಹೀಗಾಗಿ ಮಾರುಕಟ್ಟೆಗೆ ಪ್ರಸ್ತುತ ಆವಕ ಕೊರತೆಯಾಗಿ ಬೆಲೆ ತೀವ್ರ ಬೆಲೆ ಏರಿಕೆಯಾಗುತ್ತಿದೆ.

ರಾಜ್ಯದಲ್ಲಿ ಪ್ರಸಕ್ತ ವರ್ಷ ನೀರಾವರಿ, ಮಳೆಯಾಶ್ರಿತ ಸುಮಾರು 3.68 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯುವ ಗುರಿ ಹೊಂದಲಾಗಿತ್ತು. ಆದರೆ, ಮಳೆ ಕೊರತೆ ಕಾರಣದಿಂದಾಗಿ 1.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ಸಾಧ್ಯವಾಗಿದೆ. ಇದರ ಪರಿಣಾಮ ರಾಜ್ಯದಲ್ಲಿ ಈ ವರ್ಷ ಈರುಳ್ಳಿಯ ಕೊರತೆ ಉಂಟಾಗಿದೆ. ಪ್ರಸ್ತುತ ಶೇ. 15-20 ರಷ್ಟು ಮಾತ್ರ ಇದ್ದು, ಬೇಡಿಕೆ ತಕ್ಕಷ್ಟು ಈರುಳ್ಳಿ ಇಲ್ಲದಿರುವುದರಿಂದ ಅಭಾವ ಸೃಷ್ಟಿಯಾಗಿದೆ.

ಈರುಳ್ಳಿ ಅಂಕಿ ಅಂಶ

ಪ್ರತಿ ವರ್ಷದ ಬೆಳೆ: **2.53**

ಈ ವರ್ಷದ ಬೆಳೆ: **2.31**

ಬೆಂಗಳೂರಿಗೆ ಪ್ರತಿ ವರ್ಷ ಬರಬೇಕಿದ್ದ ಇಳುವರಿ: **80-90** ಸಾವಿರ ಚೀಲ

ಈ ವರ್ಷ ಬಂದ ಇಳುವರಿ: **20-25** ಸಾವಿರ ಚೀಲ

ಈ ಬಾರಿ ಮಳೆ ಕೊರತೆ

ಆಗಸ್ಟ್‌ನಲ್ಲಿ ಏಕಾಏಕಿ ಮಳೆ ಕೈಕೊಟ್ಟಿದ್ದರಿಂದ ಬೆಳೆಗೆ ನೀರಿನ ಕೊರತೆ ಉಂಟಾಯಿತು. ಕೊಳವೆ ಬಾವಿ, ನದಿ, ಹಳ್ಳಗಳಿಗೆ ಅಳವಡಿಸಿದ್ದ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಮಸ್ಯೆ ಎದುರಾಗಿದ್ದರಿಂದ ಸಮೃದ್ಧವಾಗಿ ಬೆಳೆದಿದ್ದ ಈರುಳ್ಳಿ ಬೆಳೆಗೆ ನೀರಿನ ಅಭಾವದಿಂದಾಗಿ ಬೆಂಕಿ ರೋಗ ತಗುಲಿದೆ. ಗಡ್ಡೆ ಕಟ್ಟುವ ಸಂದರ್ಭದಲ್ಲಿಯೇ ರೋಗ ಬಾಧಿಸಿದ್ದು, ಇಳುವರಿ ಕುಸಿಯಲು ಕೂಡಾ ಕಾರಣವಾಗಿದೆ. ಸಾಮಾನ್ಯವಾಗಿ ಎಕರೆಗೆ 50 ಕೆಜಿಯ 200 ರಿಂದ 250 ಚೀಲದಷ್ಟು ಈರುಳ್ಳಿ ಇಳುವರಿ ಬರುತಿತ್ತು. ಆದರೆ, ಈ ವರ್ಷ ಬರ, ಬೆಂಕಿ ರೋಗದಿಂದಾಗಿ ಎಕರೆಗೆ 80 ರಿಂದ 100 ಚೀಲ ಮಾತ್ರ ಇಳುವರಿ ಬಂದಿದೆ ಎಂದು ಹೇಳಲಾಗುತ್ತಿದೆ.

ಬೆಂಗಳೂರು ಮಾರುಕಟ್ಟೆ ಕನಿಷ್ಠ 80-90 ಸಾವಿರ ಚೀಲಗಳಷ್ಟು ಪೂರೈಕೆಯಾಗಬೇಕಿದ್ದ ಈರುಳ್ಳಿ ಈಗ 20-25 ಸಾವಿರ ಚೀಲಗಳಷ್ಟು ಬರುತ್ತಿದೆ. ಜತೆಗೆ ಮಹಾರಾಷ್ಟ್ರ 30-40 ಸಾವಿರ ಸೇರಿ ಈ ಒಟ್ಟು 5060 ಸಾವಿರ ಚೀಲಗಳಷ್ಟು ಮಾತ್ರ ಪೂರೈಕೆಯಾಗುತ್ತಿದೆ ಬೇಡಿಕೆ ತಾಕಷ್ಟು ಈರುಳ್ಳಿ ಪೂರೈಕೆಯಗುತ್ತಿಲ್ಲ.

ಬಾಸುಮತಿ ಅಕ್ಕಿ ರಫ್ತಿನ ದರ ₹78,850ಕ್ಕೆ ಇಳಿಕೆ

ಹೊಸ ಬೆಳೆ ಹಿನ್ನೆಲೆ: ವಾಣಿಜ್ಯ ಸಚಿವಾಲಯ ಕ್ರಮ

ದೆಹಲಿ: ಬಾಸ್ಮತಿ ಅಕ್ಕಿಯ ಕನಿಷ್ಠ ರಫ್ತು ದರ (ಎಂಇಪಿ) ಟನ್‌ಗೆ 99,600 ರು. ಇದ್ದಿದ್ದನ್ನು 78,850 ರು.ಗೆ ಇಳಿಕೆ ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.



ಪ್ರೀಮಿಯಂ ಬಾಸ್ಮತಿ ಅಕ್ಕಿ ಬದಲಾಗಿ ಬಾಸ್ಮತಿ ಅಲ್ಲದ ಅಕ್ಕಿಯನ್ನು ಅಕ್ರಮವಾಗಿ ರಫ್ತು ಮಾಡುವ ಸಾಧ್ಯತೆಯನ್ನು ತಡೆಯಲು ಕೇಂದ್ರ ಸರ್ಕಾರವು ಆಗಸ್ಟ್ 27ರಂದು ಪ್ರತಿ ಟನ್‌ಗೆ 99,600 ರು. ರಫ್ತು ದರ ನಿಗದಿಪಡಿಸಿತ್ತು. ಆದರೆ, ಗರಿಷ್ಠ ರಫ್ತು ದರಕ್ಕೆ ರಫ್ತುದಾರರು ಅಸಮಾಧಾನ ವ್ಯಕ್ತಪಡಿಸಿದ್ದರು. ಎಂಇಪಿ ತಗ್ಗಿಸಬೇಕು ಎನ್ನುವ ಉದ್ಯಮದ ಬೇಡಿಕೆಯನ್ನು ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಆಹಾರ ಸಚಿವಾಲಯವು ಈಚೆಗಷ್ಟೇ ಹೇಳಿತ್ತು. ಹೊಸ ಬೆಳೆ ಬಂದಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರ ಇಳಿಕೆ ಕಂಡಿದೆ. ಆದರೆ, ರಫ್ತು ದರ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ರಫ್ತುದಾರರು ರೈತರಿಂದ ಅಕ್ಕಿ ಖರೀದಿಸುವುದನ್ನು ನಿಲ್ಲಿಸಿದ್ದಾರೆ. ಇದರಿಂದಾಗಿ ರೈತರು ಮತ್ತು ರಫ್ತುದಾರರು ಇಬ್ಬರಿಗೂ ನಷ್ಟವಾಗುತ್ತಿದೆ ಎಂದು ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟವು ಈಚೆಗಷ್ಟೇ ಸರಕಾರಕ್ಕೆ ತಿಳಿಸಿತ್ತು. 2022-23ರಲ್ಲಿ ಭಾರತವು 45.6 ಲಕ್ಷ ಟನ್‌ನಷ್ಟು ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡಿದೆ. ಉದ್ಯಮಗಳ ಪ್ರಕಾರ, 2021 ಮತ್ತು 2022ರಲ್ಲಿ ಸರಾಸರಿ ರಫ್ತು ದರವು ಟನ್‌ಗೆ 70,550 ರು.ನಿಂದ 74,700 ರು.ರವರೆಗೆ ಇತ್ತು.

27-10-2023
Viswavani Pg 11

India set to increase scientifically made seeds for farmers, to boost exports: Shah

RAJESH KUMAR THAKUR @ New Delhi



Home Minister Amit Shah unveils the logo of BBSSL along with its president Yogender Kumar at a national symposium in New Delhi on Thursday | PTI

INDIA is heralding a change in crop production with quality seeds, and to set a global benchmark in quality seed production, the government has established a new cooperative society with the aim of providing certified and scientifically prepared seeds to each farmer in the country, said Home Minister Amit Shah on Thursday.

At a national symposium on 'Production of Improved and Traditional Seeds Through Cooperative Sector', Shah said that the Bharatiya Beej Sahakari Samiti Limited (BBSSL) has been established to boost domestic production as well as export of certified seeds.

Outlining the government's priorities on seed production for farmers, the minister said that the Indian Farmers Fertilizer Cooperative Ltd (IFFCO), Krishak Bharati Cooperative Ltd (KRIBHCO), National Agricultural Cooperative Marketing Federation of India (NAFED), National Dairy Development Board (NDDB) and National Cooperative Development Corporation (NCDC) have jointly promoted BBSSL.

Dwelling upon the seed production and its contribution to the agricultural revolution, Shah said, "The traditional Indian seeds have to conserved and passed onto the coming generations, so that the production of healthy grains, fruits and vegetables continues. This would be done by the BBSSL." He said that if the farmers do not get certified seeds, it would certainly have impact on the country's production of food grains.

He said that the government initiatives through cooperative have made a new beginning in the field of cooperative movement, farmer's welfares and food production in the country. "The BBSSL will have a huge contribution in making India self reliant in the field of seed conservation, promotion and research in the coming days," the minister said.

27-10-2023
Ind Exp Pg 11